# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಟ್/ಉಪಲೋಕ್/ಎಂವೈಎಸ್/8983/2017/ಎಆರ್‌ಇ-3

ಬಹು ಅಂತಸ್ತಿನ ಕಟ್ಟಡ,
ಡಾ: ಬಿ. ಆರ್. ಅಂಬೇಡ್ಕರ್ ಬೀದಿ,
ಬೆಂಗಳೂರು,
ದಿನಾಂಕ 12-04-2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12 (3)ರ ಅನ್ವಯ ವರದಿ

ವಿಷಯ:- ಏಳನೇ ಎದುರುದಾರರಾದ ಶ್ರೀ ಹೆಚ್. ಎಸ್. ಉಮೇಶ್, ಹಿಂದಿನ ಗ್ರಾಮಲೆಕ್ಕಾಧಿಕಾರಿಗಳು, ಜಗಳೂರು ವೃತ್ತ ಪ್ರಸ್ತುತ ಕಂದಾಯಾಧಿಕಾರಿಗಳು, ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ, 1966ರ ನಿಯಮ 3 (1)ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ತಮ್ಮ ವ್ಯಾಪ್ತಿಯಲ್ಲಿ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12 (3) ರೀತ್ಯ ಕಳುಹಿಸುತ್ತಿರುವ ವರದಿ.

-$$-

1) ಶ್ರೀ. ಸುನೀಲ್‌ಕುಮಾರ್,ಕೆ. ಬಿನ್ ಕಾಟ್‌ರಾಜ್, ಎ, ವಾಸ 6ನೇ ಕ್ರಾಸ್, ಹಾಸನ ರಸ್ತೆ, ಅರಸೀಕೆರೆ ಪಟ್ಟಣ, ಹಾಸನ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ 1) ಶ್ರೀ. ಪರಮೇಶ್, ಆಯುಕ್ತರು, ನಗರಸಭೆ, ಅರಸೀಕೇರೆ ಮತ್ತು 2) ಶ್ರೀಮತಿ. ಪುಷ್ಪಲತಾ, ರೋಜಗರ್ ಯೋಜನಾಧಿಕಾರಿ, ನಗರಸಭೆ, ಅರಸೀಕೇರೆ(ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ದೂರನ್ನು ನೀಡಿದ್ದು, ಸದರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತದೆ.

2) **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸುವುದೇನೆಂದರೆ, ಸರ್ಕಾರದ ಅನುದಾನದಲ್ಲಿ 22.75% ಮತ್ತು 24.10% ಅನುದಾನದಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆಗಳು ಜಾರಿಯಲ್ಲಿದ್ದು, 2013 ರಿಂದ 2016

ರವರೆಗೆ ಎದುರುದಾರರು ಸರ್ಕಾರಿ ನೌಕರರ ಮಕ್ಕಳುಗಳಿಗೆ ಈ ಸೌಲಭ್ಯ ಇರುವುದಿಲ್ಲವಾದರೂ ಸಹ ಈ ಸೌಲಭ್ಯವನ್ನು ನೀಡಿದ್ದಾರೆ. ನಕಲಿ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಒಂದೇ ಮನೆಯ 3 ಜನರಿಗೆ ಸೌಲಭ್ಯ ನೀಡಿದ್ದಾರೆ. ಬೇರೆಯವರಿಗೆ ಇದರಿಂದ ಅವಕಾಶ ದೊರೆತಿಲ್ಲ. 3-4 ವರ್ಷಗಳಿಂದ ಪ್ರತಿ ವರ್ಷವೂ ಪೃಥ್ವಿರಾಜ್.ಎ. ಬಿನ್ ಜಯರಾಂ, ಪಲ್ಲವಿ, ಬಿನ್ ಅನಂತಸಿಂಗ್, ವಿ.ಸಿಂಧೂ ಬಿನ್ ವಿಜಯನ್ ರವರಿಗೆ ಈ ಸೌಲಭ್ಯ ನೀಡಲಾಗುತ್ತಿದ್ದು ಬೇರೆಯವರಿಗೆ ಅವಕಾಶ ದೊರೆಯುತ್ತಿಲ್ಲ. ಆದುದರಿಂದ ತನಿಖೆ ನಡೆಸಿ ಕ್ರಮಕೈಗೊಳ್ಳುವಂತೆ ಕೋರಿರುತ್ತಾರೆ, ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

3) ದೂರುದಾರರ ದೂರಿನ ಕುರಿತು ದೂರು ತನಿಖಾ ಕಾಲದಲ್ಲಿ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಫಲಾನುಭವಿಗಳು ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ಸಹಾಯಧನ ಬಿಡುಗಡೆ ಮಾಡಲಾಗಿದೆ. ದಾಖಲೆಗಳನ್ನು ಪತ್ತೆ ಹಚ್ಚುವ ಕಾರ್ಯವ್ಯಾಪ್ತಿ ನಮ್ಮ ಕಛೇರಿಗೆ ಇರುವುದಿಲ್ಲ. ದಿನಾಂಕ 11/01/2016 ರ ಸಾಮಾನ್ಯ ಸಭೆಯಲ್ಲಿ ಇಂಜಿನಿಯರಿಂಗ್ ಮತ್ತು ಉನ್ನತ ಶಿಕ್ಷಣ ಫಲಾನುಭವಿಗಳ ಪಟ್ಟಿಯಲ್ಲಿ ಶಶಿಕಲಾ ಬಿನ್ ಸ್ವಾಮಿನಾಯ್ಕ ದಿನಾಂಕ 26/03/2016 ರ ಸಾಮಾನ್ಯ ಸಭೆಯಲ್ಲಿ ಪಲ್ಲವಿ ಬಿನ್ ಸ್ವಾಮಿನಾಯ್ಕ, ಶ್ರೀಧರ್‌ನಾಯ್ಕ ಬಿನ್ ಸ್ವಾಮಿನಾಯ್ಕ ರವರನ್ನು ಆಯ್ಕೆ ಮಾಡಿದ್ದು ಸದರಿಯವರು ಒಂದೇ ಕುಟುಂಬದವರು ಆಗಿರುತ್ತಾರೆ. ಒಂದೇ ಕುಟುಂಬದವರನ್ನು ಆಯ್ಕೆ ಮಾಡಬಾರದು ಎಂದು ಸರ್ಕಾರದ ಸುತ್ತೋಲೆ ಇರುವುದಿಲ್ಲ. ನಂದಿನಿ.ಎಸ್. ಬಿನ್ ಶಾಮಯ್ಯ ಎಸ್, ಸಿಂಧು.ಎ. ಬಿನ್ ಆನಂದರಾಜು ಟಿ., ಜೆ. ಪೃಥ್ವಿರಾಜ್ ಬಿನ್ ಜಯರಾಮ್, ಗಂಗಾಭವಾನಿ ಬಿನ್ ಅನಂತಸಿಂಗ್, ಸಿಂಧೂ.ಆರ್ ಬಿನ್ ರಾಜಪತಿ ಎ., ಮನೋಜಕುಮಾರ್ ಆರ್ ಬಿನ್ ರಾಜಪತಿ.ಎ., ಇವರೆಲ್ಲರೂ ಪರಿಶಿಷ್ಟ ಜಾತಿಗೆ ಸೇರಿದ್ದು ಜೆ. ಪೃಥ್ವಿರಾಜ್ ಬಿನ್ ಜೆ. ವಿ. ಜಯರಾಮ್ ರವರಿಗೆ ಮಾತ್ರ 2013-14, 2015-2016 ರ ಸಾಲಿನಲ್ಲಿ ಸಹಾಯಧನ ನೀಡಲಾಗಿದ್ದು 2013-14 ರ ಸಾಲಿನಲ್ಲಿ ಸಿಂಧೂ ಆರ್. ಮತ್ತು ಮನೋಜ್‌ಕುಮಾರ್ ರವರಿಗೆ ಸಹಾಯ ಧನ ನೀಡಿದ್ದು, ಒಬ್ಬನೇ ವ್ಯಕ್ತಿಗೆ ಪ್ರತಿವರ್ಷವೂ ಸಹಾಯಧನವನ್ನು ನೀಡಬಾರದು ಎಂದು ಸರ್ಕಾರದ ಆದೇಶವಿರುವುದಿಲ್ಲ. ಪುಥ್ವಿರಾಜ್ ಬಿನ್ ಜಯರಾಂ ರವರಿಗೆ ವಾರ್ಷಿಕ ಆದಾಯ ರೂ. 11,000/- ಗಳೆಂದು ತಹಶೀಲ್ದಾರ್ ರವರು ದೃಢೀಕರಣ ನೀಡಿದ್ದು, ಬಡತನ ರೇಖೆಗಿಂತ ಕೆಳಗಿದ್ದು ದಿನಾಂಕ

11/01/2016 ರ ಸಾಮಾನ್ಯ ಸಭೆಯಲ್ಲಿ 2015-2016 ರ ಸಾಲಿನಲ್ಲಿ ಆಯ್ಕೆ ಮಾಡಿ ರೂ. 15,000/- ಸಹಾಯ ಧನ ನೀಡಲಾಗಿದೆ. ಪಲ್ಲವಿ ಬಿನ್ ಅನಂತಸಿಂಗ್ ರವರಿಗೆ ತಹಶೀಲ್ದಾರ್ ರವರು ದೃಢೀಕರಣ ನೀಡಿದ್ದು, ಬಡತನ ರೇಖೆಗಿಂತ ಕೆಳಗಿದ್ದು ರೂ. 11,000/- ಆದಾಯವಿದೆ ಎಂದು ಹೇಳಿದ್ದರಿಂದ ದಿನಾಂಕ 04/08/2016 ರ ಸಾಮಾನ್ಯಸಭೆಯಲ್ಲಿ 2016-2017 ನೇ ಸಾಲಿನಲ್ಲಿ ಆಯ್ಕೆ ಮಾಡಿ ರೂ. 6,000/- ಸಹಾಯಧನ ನೀಡಲಾಗಿದೆ. ವಿ.ಸಿಂಧೂ ಬಿನ್ ವಿಜಯನ್ ಪಿ. ರವರಿಗೆ ತಹಶೀಲ್ದಾರ್ ರವರು ರೂ. 11,000/- ಎಂದು ಆದಾಯ ದೃಢೀಕರಣ ನೀಡಿದ್ದು ಬಡತನ ರೇಖೆಗಿಂತ ಕೆಳಗಿದ್ದು ದಿನಾಂಕ 17/12/2016 ರಂದು ಸಾಮಾನ್ಯ ಸಭೆಯಲ್ಲಿ 2016-2017 ನೇ ಸಾಲಿನ ಫಲಾನುಭವಿಗಳು ಎಂದು ಆಯ್ಕೆ ಮಾಡಿ ರೂ. 3,000/- ಸಹಾಯಧನ ವಿತರಿಸಲಾಗಿದೆ ಎಂದು ಹೇಳಿರುತ್ತಾರೆ ಹಾಗೂ ಸಭಾ ನಡವಳಿಗಳ ಕಾಪಿಗಳು, ಫಾರ್ಮ್-ಡಿ, ಆದಾಯ ದೃಢೀಕರಣ ಪತ್ರ ಬಿಪಿಎಲ್ ಕಾರ್ಡ್‌ಗಳ ಪ್ರತಿಯನ್ನು ತಮ್ಮ ಆಕ್ಷೇಪಣಾ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ.

4) 2ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸಿದ್ದು 1ನೇ ಎದುರುದಾರರು ಹೇಳಿರುವ ವಿಚಾರಗಳನ್ನೇ ಹೇಳಿರುತ್ತಾರೆ.

5) ಮುಂದುವರಿದ ತನಿಖಾ ಕಾಲದಲ್ಲಿ ಎದುರುದಾರರು ಸಲ್ಲಿಸಿರುವ ಆಕ್ಷೇಪಣಾ ವರದಿ ಹಾಗು ಅಡಕಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ನೀಡಲು ಸೂಚಿಸಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು ದೂರಿನಲ್ಲಿ ಹೇಳಿರುವ ಅಂಶಗಳನ್ನೇ ಹೇಳಿರುತ್ತಾರೆ.

6) ನಂತರ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ರವರಿಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ್ದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

7) ಪೋಲೀಸ್ ಅಧೀಕ್ಷಕರು ತಮ್ಮ ವರದಿಯಲ್ಲಿ, ಅರ್ಜಿಯಲ್ಲಿ ಕಂಡುಬಂದ 3 ವಿದ್ಯಾರ್ಥಿಗಳು ಪೃಥ್ವಿರಾಜ್ ಜೆ. ಬಿನ್ ಜಯರಾಮ, ಎ.ಪಲ್ಲವಿ ಬಿನ್ ಅನಂತಸಿಂಗ್ ಮತ್ತು ವಿ.ಸಿಂಧೂ ಬಿನ್ ವಿಜಯನ್ ರವರು ಸರ್ಕಾರಿ ನೌಕರರ ಮಕ್ಕಳುಗಳು ಎಂಬುದಾಗಿ ದೃಢಪಟ್ಟಿದ್ದು ಅರಸೀಕೆರೆ ನಗರ ಸಭೆಯಲ್ಲಿ ಶೇ.24.10 ಯೋಜನೆಯ ಅನುದಾನದಡಿ ಫಲಾನುಭವಿಗಳು ಆಗಿರುತ್ತಾರೆ. ಅವರ ಕುಟುಂಬದ ವಾರ್ಷಿಕ ಆದಾಯವು ರೂ. 11,000/- ಗಳೆಂದು ಅಂದಿನ ಸರ್ಕಾರಿ ನೌಕರರಾದ 1)

ಐ. ಎಂ. ಬಾಲಕೃಷ್ಣ, ಗ್ರಾಮ ಲೆಕ್ಕಿಗರು, ಜಾಜೂರು ವೃತ್ತ, ಕಸಬಾ ಹೋಬಳಿ ಹಾಲಿ ಗ್ರಾಮ ಲೆಕಿಗರು, ಜಾವಗಲ್ ವೃತ್ತ, ಜಾವಗಲ್ ಹೋಬಳಿ, ಅರಸೀಕೆರೆ ತಾಲ್ಲೂಕು, 2) ಕೆ. ವಿ. ನಂಜುಂಡಯ್ಯ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಲೀ ಆರ್. ಆರ್.ಟಿ. ಶಿರಸ್ತೇದಾರರು, ಕಡೂರು ತಾಲ್ಲೂಕು ಕಛೇರಿ, ಚಿಕ್ಕಮಗಳೂರು ಜಿಲ್ಲೆ ಇವರುಗಳು ಕ್ರಮವಾಗಿ ನೀಡಿದ ವರದಿಗಳನ್ನು ಅರಸೀಕೆರೆ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ. ಪುಟ್ಟಯ್ಯ, ಶಿರಸ್ತೇದಾರರು ಇವರು ಅನುಮೋಧಿಸಿದ್ದು, ಶ್ರೀ ವೈ. ಪಿ. ಪಾಲಾಕ್ಷ ತಹಶೀಲ್ದಾರ್, ಗ್ರೇಡ್-2 ಇವರು ಆದಾಯ ಪ್ರಮಾಣ ಪತ್ರವನ್ನು **ಜಿ. ಪೃಥ್ವಿರಾಜ್ ಇವರಿಗೆ ನೀಡಿರುತ್ತಾರೆ.**

8) ಹೆಚ್. ಎಸ್. ಉಮೇಶ್, ಗ್ರಾಮಲೆಕ್ಕಿಗರು, ಜಾಜರು ವೃತ್ತ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು, ಶ್ರೀ ಕೆ. ವಿ. ನಂಜುಂಡಯ್ಯ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು ರವರು ನೀಡಿದ ವರದಿಗಳನ್ನು ತಾಲ್ಲೂಕು ಕಛೇರಿಯ ಸಿಬ್ಬಂದಿ ಕೆ. ಪುಟ್ಟಯ್ಯ, ವಿಷಯ ನಿರ್ವಾಹಕರು ಹಾಗೂ ಶ್ರೀ ರಾಜಶೇಖರಪ್ಪ, ಶಿರಸ್ತೇದಾರರು, ತಾಲ್ಲೂಕು ಕಛೇರಿ , ಅರಸೀಕೆರೆ ರವರ ಅನುಮೋದನೆಯ ಮೇರೆಗೆ ತಹಶೀಲ್ದಾರ್ ಶ್ರೀ ಎಸ್. ಎಂ. ಶಿವಕುಮಾರ್, ರವರು ಆದಾಯ ಪ್ರಮಾಣ ಪತ್ರವನ್ನು **ವಿ. ಸಿಂಧು ಬಿನ್ ವಿಯಜನ್ ಪಿ. ಇವರಿಗೆ ನೀಡಿರುತ್ತಾರೆ.**

9) ಐ. ಎಂ. ಬಾಲಕೃಷ್ಣ, ಗ್ರಾಮಲೆಕ್ಕಿಗರು, ಜಾಜೂರು ವೃತ್ತ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು ಹಾಗೂ ಶ್ರೀ ಕೆ.ವಿ. ನಂಜುಂಡಯ್ಯ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು ರವರು ವರದಿಗಳನ್ನು ವಿಷಯ ನಿರ್ವಾಹಕರಾದ ಎಸ್. ಎಂ. ನಾಗರತ್ನ, ದ್ವಿ.ದ.ಸ, ಹಾಗು ಕೆ. ಪುಟ್ಟಯ್ಯ, ಶಿರಸ್ತೇದಾರರು, ತಾಲ್ಲೂಕು ಕಛೇರಿ, ಅರಸೀಕೆರೆರವರ ಅನುಮೋದನೆಯ ಮೇರೆಗೆ ವೈ.ಪಿ. ಪಾಲಾಕ್ಷ, ತಹಶೀಲ್ದಾರ್ ಗ್ರೇಡ್-2, ತಾಲ್ಲೂಕು ಕಛೇರಿ, ಅರಸೀಕೆರೆ ಇವರು ಎ.ಪಲ್ಲವಿ ಇವರಿಗೆ ಆದಾಯ ಪ್ರಮಾಣಪತ್ರವನ್ನು ನೀಡಿರುತ್ತಾರೆ.

10) ಪೋಲೀಸ್ ಅಧೀಕ್ಷಕರು ತಮ್ಮ ವರದಿಯಲ್ಲಿ, ಆಹಾರ ಇಲಾಖೆಯ ನೌಕರರಾದ ಶ್ರೀ. ಪ್ರಭುಶಂಕರ್, ಶ್ರೀ. ಗಂಗಾಧರಯ್ಯ ಹಾಗೂ ಆಯುಕ್ತರು, ಆಹಾರ ಇಲಾಖೆ ರವರುಗಳ ಲಾಗಿನ್‌ಗಳಲ್ಲಿ ಪಡಿತರ ಚೀಟಿಗಳನ್ನು ಅನುಮೋದಿಸಿದೆ. ಫಲಾನುಭವಿಗಳ ಆಯ್ಕೆ ಪರಿಶೀಲನೆಯಲ್ಲಿ 1ನೇ ಎದುರುದಾರರ **ಬೇಜವಾಬ್ದಾರಿಯುತ ಕ್ರಮ ಕಂಡುಬಂದಿರುತ್ತದೆ. 2ನೇ ಎದುರುದಾರರ ವಿರುದ್ಧ ಆರೋಪಗಳು**

ಸಾಬೀತಾಗಿರುವುದಿಲ್ಲ ಎಂದು ಅಭಿಪ್ರಾಯಿಸಿರುತ್ತಾರೆ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

11) ದಿನಾಂಕ 19/04/2018ರ ಗೌರವಾನ್ವಿತರ ಆದೇಶದಂತೆ 2ನೇ ಎದುರುದಾರರಾದ ಶ್ರೀಮತಿ. ಪುಷ್ಪಲತಾ, ರೋಜಗರ್ ಯೋಜನಾಧಿಕಾರಿ, ನಗರಸಭೆ, ಅರಸಿಕೇರೆ ರವರನ್ನು ಡಿಲೀಟ್ ಮಾಡಿ, (2) ಶ್ರೀ ಐ.ಎಂ. ಬಾಲಕೃಷ್ಣ, ಹಿಂದಿನ ಗ್ರಾಮಲೆಕ್ಕಾಧಿಕಾರಿ, ಜಾಜೂರು ವೃತ್ತ, (3) ಶ್ರೀ ಕೆ. ವಿ. ನಂಜುಂಡಯ್ಯ, ಕಂದಾಯಾಧಿಕಾರಿಗಳು,(4) ಶ್ರೀಮತಿ ಎಸ್. ಎಂ. ನಾಗರತ್ನ, ದ್ವಿತೀಯ ದರ್ಜೆ ಸಹಾಯಕರು ಮತ್ತು ವಿಷಯ ನಿರ್ವಾಹಕರು, ತಾಲ್ಲೂಕು ಕಛೇರಿ, ಚಿಕ್ಕಮಗಳೂರು, (5) ಶ್ರೀ ಕೆ. ಪುಟ್ಟಯ್ಯ, ಹಿಂದಿನ ಶಿರಸ್ತೇದಾರರು, ತಾಲ್ಲೂಕು ಕಛೇರಿ, ಅರಸೀಕೆರೆ (6) ಶ್ರೀ ವೈ. ಪಿ. ಪಾಲಾಕ್ಷ ತಹಸೀಲ್ದಾರ್, ಗ್ರೇಡ್ –2, ತಾಲ್ಲೂಕು ಕಛೇರಿ, ಅರಸೀಕೆರೆ (7) ಶ್ರೀ ಹೆಚ್. ಎಸ್. ಉಮೇಶ್, ಗ್ರಾಮ ಲೆಕ್ಕಾಧಿಕಾರಿ, ಜಾಜೂರು ವೃತ್ತ, ಕಸಬ ಹೋಬಳಿ ಪ್ರಸ್ತುತ ರಾಜಸ್ವ ನಿರೀಕ್ಷಕರು, ಗಂಡಸಿ ಹೋಬಳಿ ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ (8)ಶ್ರೀ ಬಿ. ರಾಜಶೇಖರಪ್ಪ, ಶಿರಸ್ತೇದಾರ್, ತಾಲ್ಲೂಕು ಕಛೇರಿ, ಅರಸೀಕೆರೆ, (9) ಶ್ರೀ ಎಸ್. ಎಂ. ಶಿವಕುಮಾರ್, ಹಿಂದಿನ ತಹಸೀಲ್ದಾರ್, ಗ್ರೇಡ್–2, ತಾಲ್ಲೂಕು ಕಛೇರಿ, ಅರಸೀಕೆರೆ, (10)ಶ್ರೀ ಪ್ರಭುಶಂಕರ್, ಆಹಾರ ನಿರೀಕ್ಷಕರು, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಮತ್ತು (11) ಶ್ರೀ ಗಂಗಾಧರಯ್ಯ, ಆಹಾರ ನಿರೀಕ್ಷಕರು, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ರವರುಗಳನ್ನು 2ರಿಂದ 11ನೇ ಎದುರುದಾರರುಗಳನ್ನಾಗಿ ಸೇರ್ಪಡೆ ಮಾಡಿ ಸದರಿಯವರುಗಳಿಗೆ ತನಿಖಾ ವರದಿಯನ್ನು ಕಳುಹಿಸಿ, ತಕರಾರನ್ನು ಸಲ್ಲಿಸುವಂತೆ ಸೂಚಿಸಲಾಯಿತು.

12) 2ನೇ ಎದುರುದಾರರಾದ ಶ್ರಿ. ಐ.ಎಂ.ಬಾಲಕೃಷ್ಣ ರವರು ತಮ್ಮ ತಕರಾರನ್ನು ಸಲ್ಲಿಸಿದ್ದು, ಪೃಥ್ವಿರಾಜ್ ರವರು ಕಛೇರಿಯ ಕಂಪ್ಯೂಟರ್ ಆಪರೇಟರ್ ಹತ್ತಿರ ರೂ. 9,000/– ಆದಾಯ ಇರುತ್ತದೆ ಎಂದು ತಿಳಿಸಿ ಬಿಪಿಎಲ್ ಕಾರ್ಡ್ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಿದ್ದು, ನಾನು ಸದರಿ ವಿಳಾಸಕ್ಕೆ ಹೋಗಿ ಪರಿಶೀಲನೆ ಮಾಡುವಾಗ ತಪ್ಪು ಮಾಹಿತಿ ನೀಡಿ ಕೂಲಿಯಿಂದ ಜೀವನ ಮಾಡುತ್ತಿರುವುದಾಗಿ ತಿಳಿಸಿ, ಅವರ ತಂದೆಯವರು ಸರ್ಕಾರಿ ನೌಕರಿಯಲ್ಲಿದ್ದ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಅಕ್ಕಪಕ್ಕದ ಮನೆಯವರೂ ಸಹ ನಿಜ ಮಾಹಿತಿ ನೀಡಿಲ್ಲ. ಪಲ್ಲವಿರವರೂ ಸಹ

ತಪ್ಪು ಮಾಹಿತಿ ನೀಡಿದ್ದಾರೆ. ಫಲಾನುಭವಿಗಳ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ ತಮ್ಮನ್ನು ಈ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

13) 3ನೇ ಎದುರುದಾರರಾದ ಶ್ರೀ.ಕೆ.ಬಿ.ನಂಜುಂಡಯ್ಯ ರವರು ತಮ್ಮ ತಕರಾರನ್ನು ಸಲ್ಲಿಸಿದ್ದು ಜೆ.ಪೃಥ್ವಿರಾಜ್ ರವರ ಮನವಿಯನ್ನು ಸ್ವೀಕರಿಸಿ ಗ್ರಾಮಲೆಕ್ಕಿಗರಾದ ಬಾಲಕೃಷ್ಣ ರವರಿಗೆ ನೀಡಿದ್ದು ಸದರಿಯವರು ಪರಿಶೀಲನೆ ನಡೆಸಿ ಮನವಿದಾರರ ಕೌಟುಂಬಿಕ ವಾರ್ಷಿಕ ವರಮಾನ ರೂ.11,000/- ಇರುವುದಾಗಿ ಶಿಫಾರಸ್ಸು ಮಾಡಿದ್ದು, ಅವರ ವರದಿಯನ್ನು ಆಧರಿಸಿ ಮಾನ್ಯ ತಹಶೀಲ್ದಾರ್ ರವರಿಗೆ ಆದಾಯ ದೃಢೀಕರಣ ಪತ್ರ ನೀಡಬಹುದಾಗಿ ಶಿಫಾರಸ್ಸು ಮಾಡಿದ್ದೇನೆ. ವಾಸ್ತವ ಅಂಶವನ್ನು ಅರ್ಜಿದಾರರು ಮರೆಮಾಚಿ ತಮ್ಮ ಸ್ವೀಕೃತ ಮನವಿಯಲ್ಲಿ ತಾವು ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ. ಆದಾಯ ದೃಢೀಕರಣದ ಸಿಂಧುತ್ವವು 6 ತಿಂಗಳ ಅವಧಿಗೆ ಸೀಮಿತವಾಗಿರುತ್ತದೆ. ಎ.ಪಲ್ಲವಿ ಮತ್ತು ವಿ.ಸಿಂಧೂ ರವರಿಗೆ ಸಂಬಂಧಪಟ್ಟ ದಾಖಲಾತಿಗಳು ತಾಲ್ಲೂಕು ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ವರದಿಯನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರ ತಹಶೀಲ್ದಾರ್ ಗ್ರೇಡ್-2 ರವರಿಗೆ ಸಂಬಂಧಿಸಿದೆ. ದಾಖಲೆಗಳನ್ನು ಸಂರಕ್ಷಣೆ ಮಾಡುವುದು ತಾಲ್ಲೂಕು ಕಛೇರಿಯ ವಿಷಯ ನಿರ್ವಾಹಕರದ್ದಾಗಿರುತ್ತದೆ. ಆದುದರಿಂದ ಪ್ರಕರಣದಿಂದ ಕೈ ಬಿಡುವಂತೆ ಕೋರಿದ್ದಾರೆ.

14) 4ನೇ ಎದುರುದಾರರಾದ ಶ್ರೀಮತಿ. ನಾಗರತ್ನ ರವರು ತಮ್ಮ ತಕರಾರನ್ನು ಸಲ್ಲಿಸಿದ್ದು, ಜೂನ್ 2014 ರಿಂದ ಜಾತಿ ಆದಾಯ ದೃಢೀಕರಣ ಪತ್ರದ ವಿಷಯ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಗ್ರಾಮಲೆಕ್ಕಿಗರ ಮತ್ತು ಆರ್.ಐ. ರವರ ವರದಿಯನ್ನೊಳಗೊಂಡ ಪೃಥ್ವಿರಾಜ್ ರವರ ಕಡತವು ಈ ಕಛೇರಿಗೆ ಸ್ವೀಕೃತವಾಗಿದ್ದು, ನನ್ನ ಗಮನಕ್ಕೆ ಬಾರದೆ ಶಿರಸ್ತೇದಾರರಾದ ಕೆ.ಪುಟ್ಟಯ್ಯ ರವರ ಮುಖಾಂತರ ಆದಾಯ ದೃಢೀಕರಣ ಪತ್ರ ನೀಡಲು ಶಿಫಾರಸ್ಸಾಗಿದ್ದು, ಅನುಮೋದನೆ ನೀಡಲಾಗಿದೆ. ಪಲ್ಲವಿ ರವರ ಕಡತವು ತಹಶೀಲ್ದಾರ್ ರವರೆಗೂ ಲಭ್ಯವಾಗಿಲ್ಲ. ಫಲಾನುಭವಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿದ್ದಾರೆ.

15) 5ನೇ ಎದುರುದಾರರಾದ ಶ್ರೀ.ಕೆ.ಪುಟ್ಟಯ್ಯ ರವರು ತಮ್ಮ ತಕರಾರನ್ನು ಸಲ್ಲಿಸಿದ್ದು, ಗ್ರಾಮ ಲೆಕ್ಕಿಗರು ಮತ್ತು ಆರ್.ಐ. ರವರ ವರದಿಗಳ ಮೇಲೆ ಶಿಫಾರಸ್ಸು ಮಾಡಿರುತ್ತೇನೆ. ಅರ್ಜಿದಾರರ ಆದಾಯದ

ನೈಜತೆ ಬಗ್ಗೆ ಪರಿಶೀಲಿಸಿ ವರದಿ ನೀಡುವ ಹೊಣೆ ಕಾರ್ಯಪಾಲಕ ಸಿಬ್ಬಂಧಿಯವರದ್ದಾಗಿರುತ್ತದೆ, ಮನವಿದಾರರು ಗಣಕೀಕೃತ ಮನವಿಯಲ್ಲಿ ತಾವು ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸಿರುವುದರಿಂದ ಹಾಗೂ ಈ ನೌಕರರು ಸುಳ್ಳು ಮಾಹಿತಿ ನೀಡಿ ಬಿಪಿಎಲ್ ಕಾರ್ಡ್ ಪಡೆದು ಆದಾಯ ದೃಢೀಕರಣ ಪತ್ರ ಪಡೆದಿರುತ್ತಾರೆ. ಆದುದರಿಂದ ಫಲಾನುಭವಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿರುತ್ತಾರೆ ಹಾಗೂ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

16) 6ನೇ ಎದುರುದಾರರಾದ ಶ್ರೀ.ವೈ.ಸಿ.ಪಾಲಾಕ್ಷ ರವರು ತಮ್ಮ ತಕರಾರನ್ನು ಸಲ್ಲಿಸಿದ್ದು, ಗ್ರಾಮಲೆಕ್ಕಿಗರ ಮತ್ತು ಆರ್.ಐ ರವರ ವರದಿಯನ್ನು ಆಧರಿಸಿ ಅನುಮೋದನೆಯ ದೃಢೀಕರಣ ಪತ್ರ ನೀಡಿರುತ್ತೇನೆ. ಫಲಾನುಭವಿಗಳ ವಿರುದ್ಧ ಕ್ರಮ ಜರುಗಿಸುವಂತೆ ಕೋರಿರುತ್ತಾರೆ ಹಾಗೂ ತಮ್ಮನ್ನು ಈ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ. ಪಲ್ಲವಿ ಮತ್ತು ಸಿಂಧೂ ರವರಿಗೆ ಸಂಬಂಧಿಸಿದ ಕಡತ ಲಭ್ಯವಿಲ್ಲ ಎಂದು ಹೇಳಿರುತ್ತಾರೆ.

17) 7ನೇ ಎದುರುದಾರರಾದ ಶ್ರೀ.ಹೆಚ್.ಎಸ್. ಉಮೇಶ್, ಗ್ರಾಮ ಲೆಕ್ಕಿಗರು ಇವರು ತಮ್ಮ ತಕರಾರನ್ನು ಸಲ್ಲಿಸಿದ್ದು, ವಿ.ಸಿಂಧೂ ರವರು ಸಲ್ಲಿಸಿರುವ ಮನವಿ ದಾಖಲಾತಿಗಳು ನನ್ನ ವರದಿ ಇರುವ ದಾಖಲೆ ತಾಲ್ಲೂಕು ಕಛೇರಿಯಲ್ಲಿ ಲಭ್ಯವಿಲ್ಲ. ನಾನು ಕೇವಲ ವರದಿ ಮಾಡುವ ಪ್ರಾಧಿಕಾರವಾಗಿದ್ದು, ನೈಜತೆಯನ್ನು ಪರಿಶೀಲಿಸುವ ಅಧಿಕಾರ ಆರ್.ಐ ರವರದು ಆಗಿರುತ್ತದೆ, ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

18) 8ನೇ ಎದುರುದಾರರಾದ ಶ್ರೀ.ಬಿ.ರಾಜಶೇಖರಪ್ಪ, ನಿವೃತ್ತ ಶಿರಸ್ತೇದಾರರು ಇವರು ತಮ್ಮ ತಕರಾರನ್ನು ಸಲ್ಲಿಸಿದ್ದು, ಅರ್ಜಿದಾರರ ಅರ್ಹತೆ ಬಗ್ಗೆ ಪರಿಶೀಲಿಸುವ ಹೊಣೆಗಾರಿಕೆ ಕಾರ್ಯಪಾಲಕ ಸಿಬ್ಬಂದಿಗಳಾದ ಆರ್.ಐ ರವರು ಮತ್ತು ವಿ.ಎ. ರವರ ಕರ್ತವ್ಯವಾಗಿರುತ್ತದೆ. ಅವರ ವರದಿಗಳು ಮತ್ತು ದಾಖಲಾತಿಗಳ ಆಧಾರದ ಮೇಲೆ ತಹಶೀಲ್ದಾರ್ ರವರಿಗೆ ದೃಢೀಕರಣ ಪತ್ರ ನೀಡಲು ಕಡತವನ್ನು ಮಂಡಿಸಿದ್ದೇನೆ. ಕಛೇರಿಯಲ್ಲಿ ಕಡತ ಲಭ್ಯವಿಲ್ಲ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

19) 9ನೇ ಎದುರುದಾರರಾದ ಎಸ್.ಎಂ.ಶಿವಕುಮಾರ್ ರವರು ದಿನಾಂಕ 22/06/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಕಂದಾಯ ನಿರೀಕ್ಷಕರ ವರದಿಯಂತೆ ಅರ್ಜಿದಾರರಿಗೆ ಪ್ರಮಾಣ ಪತ್ರ ನೀಡಲಾಗಿರುತ್ತದೆ. ಆದಾಯ ಪ್ರಮಾಣ ಪತ್ರವನ್ನು ಅಧಿಕೃತವಾಗಿ ಕಾರ್ಯ ನಿರ್ವಾಹಕ ಸಿಬ್ಬಂದಿಗಳಾದ ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರ ವರದಿಯನ್ನು ಆಧರಿಸಿ ನೀಡಲಾಗಿರುತ್ತದೆ. ಸದರಿ ಅವಧಿಯಲ್ಲಿ ಕಸಬಾ ಹೋಬಳಿಯ ಕಂದಾಯ ನಿರೀಕ್ಷಕರಾಗಿ ಕೆ.ವಿ.ನಂಜುಂಡಯ್ಯ ರವರು ಕಾರ್ಯ ನಿರ್ವಹಿಸುತ್ತಿದ್ದರು. ಇವರ ವರದಿಯ ಮೇರೆಗೆ ತಾಲ್ಲೂಕು ಕಛೇರಿಯ ವಿಷಯನಿರ್ವಾಹಕರಾದ ಶ್ರೀ. ಕೆ.ಪುಟ್ಟಯ್ಯ ಮತ್ತು ಶಿರಸ್ತೇದಾರರಾದ ಶ್ರೀ. ರಾಜಶೇಖರಪ್ಪ ರವರು ಗ್ರಾಮಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರಿಂದ ಬಂದ ವರದಿಯನ್ನು ಪರಿಶೀಲಿಸಿ ತಹಶೀಲ್ದಾರ್ ರವರ ಅನುಮೋದನೆಗೆ ಕಡತ ಸಲ್ಲಿಸಿರುತ್ತಾರೆ. ನಂತರ ನನ್ನ ಅವಧಿಯಲ್ಲಿ ಅನುಮೋದಿಸಿರುವುದು ಕಂಡು ಬಂದಿಯುತ್ತದೆ. ಸದರಿ ಆದಾಯ ಪ್ರಮಾಣ ಪತ್ರದ ಸಿಂಧುತ್ವವು ಕೇವಲ 6 ತಿಂಗಳ ಅವಧಿಗೆ ಮಾತ್ರ ಸಿಂಧುತ್ವ ಹೊಂದಿದ್ದು, ವಿತರಣಾ ಅವಧಿಯಿಂದ 6 ತಿಂಗಳ ಒಳಗಾಗಿ ಮಾತ್ರ ಮಾನ್ಯತೆಯನ್ನು ಹೊಂದಿರುತ್ತದೆ, ಸದರಿ ಪ್ರಕರಣದಲ್ಲಿ ಅವಧಿ ಮೀರಿದ ಮಾನ್ಯತೆ ಹೊಂದಿರದ ಪ್ರಮಾಣ ಪತ್ರವನ್ನು ಒದಗಿಸಿ, ಅರ್ಜಿದಾರರು ವಾಸ್ತವಾಂಶವನ್ನು ಮರೆಮಾಡಿ ಸೌಲಭ್ಯ ಪಡೆದಿರುತ್ತಾರೆ. ಕಸಬಾ ಹೋಬಳಿಯ ಅರಸೀಕೆರೆ ತಾಲ್ಲೂಕು ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರು ಸ್ಥಳ ತನಿಖೆ ಮಾಡದೇ ತಪ್ಪಾಗಿ ವರದಿ ಮಾಡಿರುವುದು ಕಂಡುಬಂದಿರುತ್ತದೆ. ಕಂದಾಯ ನಿರೀಕ್ಷಕರ ವರದಿಯಂತೆ ವಿಷಯನಿರ್ವಾಹಕರು ಹಾಗೂ ಶಿರಸ್ತೇದಾರರು ಅನುಮೋದಿಸಿ ಪ್ರಮಾಣ ಪತ್ರದ ಕರಡನ್ನು ಸಿದ್ಧಪಡಿಸಿ ತಹಶೀಲ್ದಾರ್ ರವರಿಗೆ ಮಂಡಿಸಿರುತ್ತಾರೆ. ಹಾಸನ ಜಿಲ್ಲೆಯಲ್ಲಿ ಅತ್ಯಂತ ದೊಡ್ಡ ತಾಲ್ಲೂಕಲಾದ ಅರಸೀಕೆರೆಯಲ್ಲಿ ಅತ್ಯಂತ ಹೆಚ್ಚಿನ ಕೆಲಸ ಕಾರ್ಯ ಬಹಳವಿದ್ದ ಕಾರಣ ತಹಶೀಲ್ದಾರ್‌ರವರಿಗೆ ಖುದ್ದು ಸ್ಥಳ ಪರಿಶೀಲನೆ ಮಾಡಲು ಸಾಧ್ಯವಾಗಿರುವುದಿಲ್ಲ ಹಾಗಾಗಿ ಕಡತ ಅನುಮೋದಿಸಲಾಗಿರುತ್ತದೆ. ದಿನಾಂಕ 07/09/2011 ರ ಆದಾಯ ಪ್ರಮಾಣ ಪತ್ರವು 5 ವರ್ಷ ಹಳೆಯದಾಗಿದ್ದು, ಇದೇ ಪ್ರಮಾಣ ಪತ್ರವನ್ನು ಆಧರಿಸಿ ದಿನಾಂಕ 24/12/2016 ರಂದು ರೂ. 3000/- ಅನುದಾನ ನೀಡಿರುವುದು, ನಗರಸಭೆ ಅಧಿಕಾರಿಗಳು ಸರಿಯಾಗಿ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲದಿರುವುದು ಕಂಡುಬರುತ್ತದೆ. ನಿಯಮಾನುಸಾರ ನಗರಸಭೆ ಅಧಿಕಾರಿಗಳು 2016ನೇ ಸಾಲಿನ ಆದಾಯ

ಪ್ರಮಾಣ ಪತ್ರವನ್ನು ಪಡೆದು ನಂತರ ಅನುದಾನ ನೀಡಬೇಕಾಗಿತ್ತು. ಹಾಗಾಗಿ ಸದರಿ ಪ್ರಕರಣದಲ್ಲಿ ಕಂದಾಯ ನಿರೀಕ್ಷಕರು ಗ್ರಾಮಲೆಕ್ಕಿಗರು ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರು ಕರ್ತವ್ಯ ಲೋಪದಿಂದಾಗಿ ತಪ್ಪಾದ ಆದಾಯ ಪ್ರಮಾಣ ಪತ್ರ ನೀಡಿರುವುದರಿಂದ ಇವರುಗಳೇ ಸಂಪೂರ್ಣವಾಗಿ ನೇರ ಹೊಣೆಗಾರರಾಗಿರುತ್ತಾರೆ, ಆದುದರಿಂದ ಸದರಿ ಪ್ರಕರಣದಿಂದ ಕೈ ಬಿಡುವಂತೆ ಕೋರಿತ್ತಾರೆ.

20) 10ನೇ ಎದುರುದಾರರು ನಾನು 2012ನೇ ಇಸವಿಯ ನವಂಬರ್ 16ನೇ ತಾರೀಖಿನಂದು ಆಹಾರ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನೇಮಕಗೊಂಡಿರುತ್ತೇನೆ, ಹೀಗಿರುವಾಗ 2009ನೇ ಸಾಲಿನಲ್ಲಿ ಪೃಥ್ವಿರಾಜ್ ಎಂಬುವರನ್ನು ಅವರ ಚಿಕ್ಕಪ್ಪ ಜೆ.ವಿ. ಚಂದ್ರಶೇಖರ ಇವರ ಕುಟುಂಬ ಪಡಿತರ ಚೀಟಿಗೆ ಸೇರ್ಪಡೆಗೊಳಿಸುವುದಕ್ಕೂ ಮತ್ತು 2012ನೇ ಸಾಲಿನಲ್ಲಿ ಉದ್ಯೋಗಕ್ಕೆ ನೇಮಕಗೊಂಡಿರುವ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಆಹಾರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುವ ವೇಳೆ 2015ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಕುಟುಂಬ ಪಡಿತರ ಚೀಟಿಗಳಿಗೆ ಫಲಾನುಭವಿಗಳ ಆಧಾರ್ ಕಾರ್ಡ್ ಸಂಖ್ಯೆಗಳನ್ನು ಲಿಂಕ್ ಮಾಡುವ ಮತ್ತು ನವೀಕರಣ ಮಾಡುವ ವೇಳೆಯಲ್ಲಿ ಅರಸೀಕೆರೆ ನಗರ ವ್ಯಾಪ್ತಿಯ ಪಡಿತರ ಚೀಟಿಗಳಿಗೆ ನನ್ನ ಹೆಸರಿನ ಲಾಗಿನ್‌ನಲ್ಲಿ ಆಧಾರ್ ಲಿಂಕ್ ಮತ್ತು ನವೀಕರಣದ ಕೆಲಸ ನಿರ್ವಹಿಸಲಾಗಿರುತ್ತದೆ. ಅಂತೆಯೇ 2015ನೇ ಸಾಲಿನಲ್ಲಿ ಜೆ.ವಿ. ಚಂದ್ರಶೇಖರ ಇವರ ಕುಟುಂಬ ಪಡಿತರ ಚೀಟಿಗೆ ನನ್ನ ಹೆಸರಿನ ಮೂಲಕ ಲಾಗಿನ್ ಆಗಿ ಆಧಾರ್ ಲಿಂಕ್ ಮಾಡಲಾಗಿದಯೇ ಹೊರತು ಈ ವೇಳೆಯಲ್ಲಿ ಯಾವುದೇ ಕುಟುಂಬ ಸದಸ್ಯರನ್ನು ಹೊಸದಾಗಿ ಸೇರ್ಪಡೆ ಮಾಡಿರುವುದಿಲ್ಲ. ಸದರಿ ಪೃಥ್ವಿರಾಜ್.ಜೆ. ಎಂಬಾತನನ್ನು 2009 ಸಾಲಿನ ದಿನಾಂಕ 31/05/2009 ರಂದೆ ಜೆ.ವಿ.ಚಂದ್ರಶೇಖರ ಇವರ ಕುಟುಂಬದ ಎಆರ್‌ಎಸ್24157345 ಸಂಖ್ಯೆಯ ಪಡಿತರ ಚೀಟಿಗೆ ಸೇರ್ಪಡೆಗೊಳಿಸಿರುವುದಾಗಿದೆ. 2009ನೇ ಸಾಲಿನಲ್ಲಿ ಬಾಲಚಂದ್ರ ಎಂಬುವರು ಅರಸೀಕೆರೆ ನಗರ ವ್ಯಾಪ್ತಿಯ ಆಹಾರ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು ಸದರಿ ಬಾಲಚಂದ್ರ ರವರು ಹಾಲಿ ಅದೇ ಅರಸೀಕೆರೆ ತಾಲ್ಲೂಕಿನ ಆಹಾರ ಶಿರಸ್ತೇದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಲೋಕಾಯುಕ್ತ ವಿಚಾರಣೆಗೆ ಈಗಾಗಲೇ ವರದಿ ನೀಡಿರುವ ಉಪ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾಧಿಕಾರಿಗಳ ಕಟ್ಟಡ, ಹಾಸನ ಜಿಲ್ಲೆ, ಹಾಸನ

ಇವರಿಂದಲೇ ಸರ್ಕಾರಿ ನೌಕರರ ಮಗನಾದ ಪೃಥ್ವಿರಾಜ್ ಜೆ. ಬಿನ್ ಜಯರಾಮು ಅರಸೀಕೆರೆ ಈತನನ್ನು 2009ನೇ ಸಾಲಿನಲ್ಲಿ ಚಿಕ್ಕಪ್ಪ ಜೆ.ವಿ. ಚಂದ್ರಶೇಖರ ಇವರ ಕುಟುಂಬಕ್ಕೆ ವಿತರಿಸಲಾಗಿರುವ ಪಡಿತರ ಚೀಟಿಗೆ ಸೇರ್ಪಡೆಗೊಳಿಸಿರುವ ಕುರಿತು ಕ್ರಮ ವಹಿಸಿರುವ ಅಧಿಕಾರಿ ನೌಕರರ ವಿವರವನ್ನು ಪಡೆದುಕೊಳ್ಳಬಹುದಾಗಿರುತ್ತದೆ ಎಂಬುದಾಗಿ ಕೋರಿ, ಈ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

21) 11ನೇ ಎದುರುದಾರರಾದ ಶ್ರೀ.ಬಿ.ಟಿ.ಗಂಗಾಧರಯ್ಯ, ನಿವೃತ್ತ ಆಹಾರ ಶಿರಸ್ತೆದಾರರು, ಹಾಸನ ಜಿಲ್ಲೆ ರವರು ದಿನಾಂಕ 20/11/2021 ರಂದು ತಮ್ಮ ಕತರಾರನ್ನು ಸಲ್ಲಿಸಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಎಫ್.ಎಸ್/ಎ ಎಂ ಓ/02/2011-12 ದಿನಾಂಕ 01.03.2012 ರಂತೆ ಪಡಿತರ ಕಾರ್ಡ್‌ದಾರರು ಪಡಿತರ ಕಾರ್ಡ್‌ನಲ್ಲಿ ಹೆಸರು ಬದಲಾವಣೆ/ಹೆಸರು ಸೇರ್ಪಡೆ/ತಿದ್ದುಪಡಿ ಮತ್ತು ಕುಟುಂಬದ ಮುಖ್ಯಸ್ಥರು ನೀಡುವ ದಾಖಲೆಗಳ ಆಧಾರದ ಮೇರೆಗೆ ಹೊಸ ಸದಸ್ಯರ ಹೆಸರನ್ನು ಸೇರ್ಪಡೆ ಮಾಡಿ ಹೊಸ ಪಡಿತರ ಕಾರ್ಡ್ ನಿಡಬಹುದಾಗಿರುತ್ತದೆ. ಇದಕ್ಕೆ ಲಿಖಿತ ಅರ್ಜಿಯನ್ನು ಸಲ್ಲಿಸಬೇಕಾಗಿರುವುದಿಲ್ಲ. ಈ ಕಾರ್ಯವನ್ನು ತಾಲ್ಲೂಕು, ಪಟ್ಟಣ, ಕೇಂದ್ರದಲ್ಲಿ ಇರುವ ಫ್ರಾಂಚೈಸಿಗಳು ನಿರ್ವಹಿಸುತ್ತದೆ. ಕಾರ್ಡ್‌ದಾರರರು ಪಡೆದುಕೊಂಡ ಸ್ವೀಕೃತಿ ಆಧಾರದ ಮೇರೆಗೆ ತಾಲ್ಲೂಕು ಕಛೇರಿಯಲ್ಲಿ ಕ್ರಮವಹಿಸಿಕೊಡಲಾಗುತ್ತದೆ. ಸರಸ್ವತಿ ಕೋಂ. ಪಿ.ವಿಜಿಯನ್ ಹಾಸನ್ ರಸ್ತೆ ಎಡ ಭಾಗ 1ನೇ ಕ್ರಾಸ್ ರಸ್ತೆ ಇಲ್ಲಿರುವ ನಿವಾಸದಲ್ಲಿ ವಾಸವಿದ್ದು ಇವರಿಗೆ ದಿನಾಂಕ 5/8/2012 ರಂದು ನಾನು ಅನುಮೋದನೆ ನೀಡಿದ ಅರ್ಜಿಗೆ ಬಿಪಿಎಲ್ ಕಾರ್ಡ್‌ಅನ್ನು 26/8/2015 ರಂದು ವಿತರಣೆಯಾಗಿರುತ್ತದೆ. ಸದರಿ ದೂರು ಅರ್ಜಿಯ ಸಂಬಂಧ ಅರಸೀಕೆರೆ ತಾಲ್ಲೂಕು ತಹಶೀಲ್ದಾರ್ ಅವರು ದಿನಾಂಕ 15/01/2018 ರಂದು ನಡೆಸಿದ ವಿಚಾರಣಾ ವೇಳೆಯಲ್ಲಿ ಸರಸ್ವತಿ ಕೋಂ. ಪಿ. ವಿಜಯನ್ ರವರು ಮತ್ತು ಅವರ ಮಗಳಾದ ವಿ.ಸಿಂಧು ಹಾಜರಾಗಿ ಹೇಳಿಕೆ ನೀಡಿರುತ್ತಾರೆ. ಇವರುಗಳ ಹೇಳಿಕೆಯನ್ನು ಗಮನಿಸಿದಾಗ ಮಕ್ಕಳಿಗಾಗಿ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು ಸತ್ಯವನ್ನು ಮರೆಮಾಚಿರುತ್ತಾರೆ ಮತ್ತು ಕುಟುಂಬದ ನೈಜ ಆದಾಯವನ್ನು ಮರೆಮಾಚಿ ಆದಾಯ ದೃಢೀಕರಣ ಪತ್ರ ಪಡೆದಿರುತ್ತಾರೆ. ಪರಿಶೀಲನಾಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿರುವುದು ಎಂಬುದಾಗಿ ತಿಳಿದು ಬರುತ್ತದೆ ಎಂಬುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಪರಿಶೀಲನಾಧಿಕಾರಿಗಳು ನೀಡಿದ ವರದಿಯ ಆಧಾರದ ಮೇರೆಗೆ ನಾನು ಸರಸ್ವತಿ

ಕೋಂ ಪಿ. ವಿಜಿಯನ್ ರವರ ಪಡಿತರ ಕಾರ್ಡ್ ಅರ್ಜಿಗೆ ಅನುಮೋದನೆ ನೀಡಿರುತ್ತೇನೆ ಮತ್ತು ಕರ್ತವ್ಯದಲ್ಲಿ ನಾನು ಯಾವುದೇ ಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

22) ತನಿಖಾಧಿಕಾರಿಗಳು ಸಲ್ಲಿಸಿರುವ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಫಲಾನುಭವಿಗಳಾದ ಪಲ್ಲವಿ ಮತ್ತು ಸಿಂಧು ರವರು ತಮ್ಮ ಪ್ರಮಾಣ ಪತ್ರಗಳಲ್ಲಿ ಅವರ ತಂದೆಯವರು ಸರ್ಕಾರಿ ಕೆಲಸದಲ್ಲಿದ್ದರು ಎಂದು ಹೇಳಿರುತ್ತಾರೆ. ಶ್ರೀ. ಜೆ.ವಿ.ಜಯರಾಮ್ ರವರಿಗೆ ಸಂಬಂಧಿಸಿದ ಫ್ಯಾಮಿಲಿ ಪೆನ್‌ಷನ್ ಪೇಮೆಂಟ್ ಆರ್ಡರ್‌ನ್ನು ಪರಿಶೀಲಿಸಿದಾಗ ಅವರು ಅಧೀಕ್ಷಕರು, ರೇಷ್ಮೆ ಇಲಾಖೆಯಲ್ಲಿ ಕೆಲಸದಲ್ಲಿದ್ದರು ಎಂದು ದೃಢಪಟ್ಟಿರುತ್ತದೆ. ಫಲಾನುಭವಿಗಳು ಸಲ್ಲಿಸಿರುವ ಮಾಹಿತಿಗಳ ಬಗ್ಗೆ ಪಲ್ಲವಿ ಮತ್ತು ಸಿಂಧೂ ರವರ ಕಡತಗಳು ಕಛೇರಿಯಲ್ಲಿ ಲಭ್ಯವಿಲ್ಲ ಎಂದು ಹೇಳಿರುತ್ತಾರೆ.

23) 2ನೇ ಎದುರುದಾರರಾದ ಶ್ರೀ. ಐ.ಎಂ.ಬಾಲಕೃಷ್ಣ, 3ನೇ ಎದುರುದಾರರಾದ ಶ್ರೀ. ಕೆ. ವಿ. ನಂಜುಂಡಯ್ಯ, 5ನೇ ಎದುರುದಾರರಾದ ಶ್ರೀ. ಕೆ. ಪುಟ್ಟಯ್ಯ, 6ನೇ ಎದುರುದಾರರಾದ ಶ್ರೀ. ವೈ.ಪಿ. ಪಾಲಾಕ್ಷ ರವರುಗಳು ವಿದ್ಯಾರ್ಥಿ ಪೃಥ್ವಿರಾಜ್ ಜೆ. ಬಿನ್ ಜಯರಾಮ್ ರವರು ಅವರ ತಂದೆಯವರು ಸರ್ಕಾರಿ ನೌಕರರಾಗಿದ್ದರೂ ಸಹ ರೂ. 11,000/- ವಾರ್ಷಿಕ ಆದಾಯ ಎಂದು ದೃಢೀಕರಿಸಿರುತ್ತಾರೆ.

24) ಶ್ರೀ. ಹೆಚ್. ಎಸ್. ಉಮೇಶ್, ಗ್ರಾಮಲೆಕ್ಕಿಗರು, ಕೆ.ವಿ. ನಂಜುಂಡಯ್ಯ, ಕಂದಾಯಾಧಿಕಾರಿಗಳು, ಕೆ. ಪುಟ್ಟಯ್ಯ, ಬಿ. ರಾಜಶೇಖರಪ್ಪ ಮತ್ತು ಎಸ್. ಎಂ. ಶಿವಕುಮಾರ್ ಇವರುಗಳು ವಿ. ಸಿಂಧು, ಬಿನ್ ವಿಜಯನ್ ಇವರಿಗೆ ಆದಾಯ ಪ್ರಮಾಣಪತ್ರವನ್ನು ನೀಡಿರುತ್ತಾರೆ.

25) ಎದುರುದಾರರು 2, 3, 5 ರಿಂದ 8 ರವರು ಸಲ್ಲಿಸಿರುವ ತಕರಾರುಗಳನ್ನು ಪರಿಶೀಲಿಸಿದಾಗ ವಿದ್ಯಾರ್ಥಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ ಅಕ್ಕಪಕ್ಕದವರು ನಿಜ ಮಾಹಿತಿ ಕೊಟ್ಟಿರುವುದಿಲ್ಲ, ಗ್ರಾಮ ಲೆಕ್ಕಿಗರು ಮತ್ತು ಆರ್.ಐ ರವರ ವರದಿಗಳ ಆಧಾರದ ಮೇಲೆ ಆದಾಯ ಪ್ರಮಾಣ ಪತ್ರ ವಿತರಿಸಲಾಗಿದೆ, ಫಲಾನುಭವಿಗಳ ವಿರುದ್ಧ ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

26) 4ನೇ ಎದುರುದಾರರಾದ ನಾಗರತ್ನ ರವರು ನನ್ನ ಗಮನಕ್ಕೆ ಬಾರದೇ ಪುಟ್ಟಯ್ಯ ರವರು ಆದಾಯ ದೃಢೀಕರಣ ಪತ್ರ ನೀಡಲು ಶಿಫಾರಸ್ಸು ಮಾಡಿದ್ದಾರೆ ಎಂದು ತಕರಾರಿನಲ್ಲಿ ಹೇಳಿದ್ದು, ಸದರಿಯವರ ಪಾತ್ರ ಇಲ್ಲದಿರುವುದರಿಂದ ಅವರನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

27) 8ನೇ ಎದುರುದಾರರಾದ ರಾಜಶೇಖರಪ್ಪ, ನಿವೃತ್ತ ಶಿರಸ್ತೆದಾರರು ಆರ್.ಐ ಮತ್ತು ವಿ.ಎ. ರವರ ವರದಿ ಮತ್ತು ದಾಖಲಾತಿಗಳ ಆಧಾರದ ಮೇಲೆ ತಹಶೀಲ್ದಾರ್ ರವರಿಗೆ ದೃಢೀಕರಣ ಪತ್ರ ನೀಡಲು ಕಡತ ಮಂಡಿಸಿದ್ದೇನೆ ಎಂದು ಹೇಳಿದ್ದು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

28) ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ರವರ ವರದಿಯನ್ನು ಪರಿಶೀಲಿಸಲಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶೇ. 24.10 ರ ಅನುದಾನದಲ್ಲಿ ನೀಡುವ ಸಹಾಯಧನ ಯೋಜನೆಯ ಅಡಿಯಲ್ಲಿ ಅರಸೀಕೆರೆ ನಗರಸಭೆಯಿಂದ 2015-16 ಮತ್ತು 2016-17 ನೇ ಸಾಲಿನಲ್ಲಿ ಸರ್ಕಾರಿ ನೌಕರರ ಮಕ್ಕಳಾಗಿರುವ ಮೂರು ಜನ ವಿದ್ಯಾರ್ಥಿಗಳಿಗೆ ಸಹಾಯಧನವನ್ನು ನೀಡಲಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿರುತ್ತದೆ. ಈ ವಿದ್ಯಾರ್ಥಿಗಳು ಸರ್ಕಾರದ ಅನುದಾನ ಪಡೆಯಲು ಅರಸೀಕೆರೆ ತಹಶೀಲ್ದಾರ್ ರವರ ಕಛೇರಿಯಿಂದ ನೀಡಲಾಗಿರುವ ಆದಾಯ ಪ್ರಮಾಣ ಪತ್ರ ಮತ್ತು ಪಡಿತರ ಚೀಟಿ ದಾಖಲಾತಿಗಳು ಪ್ರಮುಖ ಕಾರಣವಾಗಿದ್ದು, ಈ ದಾಖಲಾತಿಗಳ ವಿತರಣೆಯಲ್ಲಿ ಕಂದಾಯ ಇಲಾಖೆಯ 1) ಐ.ಎಂ.ಬಾಲಕೃಷ್ಣ ಗ್ರಾಮ ಲೆಕ್ಕಿಗರು ಜಾಜೂರು ವೃತ್ತ ಕಸಬಾ ಹೋಬಳಿ ಹಾಲಿ ಗ್ರಾಮ ಲೆಕ್ಕಿಗರು ಜಾವಗಲ್ ವೃತ್ತ ಅರಸೀಕೆರೆ ತಾಲ್ಲೂಕು, 2) ಶ್ರೀ.ಕೆ.ವಿ.ನಂಜುಂಡಯ್ಯ, ರಾಜಸ್ವ ನಿರೀಕ್ಷಕರು ಕಸಬಾ ಹೋಬಳಿ ಅರಸೀಕೆರೆ ತಾಲ್ಲೂಕು ಹಾಲಿ ಆರ್.ಆರ್.ಟಿ. ಶಿರಸ್ತೇದಾರ್ ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ, 3) ಹೆಚ್.ಎಸ್.ಉಮೇಶ್ ಗ್ರಾಮ ಲೆಕ್ಕಿಗರು ಜಾಜೂರು ವೃತ್ತ ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಲಿ ರಾಜಸ್ವ ನಿರೀಕ್ಷಕರು ಗಂಡಸಿ ಹೋಬಳಿ ಅರಸೀಕೇರೆ ತಾಲ್ಲೂಕು ಮತ್ತು ಆಹಾರ ಇಲಾಖೆಯ ನೌಕರರಾದ ಶ್ರೀ ಪ್ರಭುಶಂಕರ್ ಆಹಾರ ನಿರೀಕ್ಷಕರು ಅರಸೀಕೆರೆ, ಶ್ರೀ ಗಂಗಾಧರಯ್ಯ ಆಹಾರ ನಿರೀಕ್ಷಕರ ಅರಸೀಕೆರೆ ಹಾಗೂ ಆಯುಕ್ತರು ಆಹಾರ ಇಲಾಖೆ ಬೆಂಗಳೂರು ರವರುಗಳ ಲಾಗಿನ್‌ಗಳಲ್ಲಿ ಅನುಮೋದಿಸಲ್ಪಟ್ಟಿರುವುದಾಗಿದ್ದು ಹಾಗೂ ಫಲಾನುಭವಿಗಳ ಆಯ್ಕೆ ಪರಿಶೀಲನೆಯಲ್ಲಿ ಅರಸೀಕೆರೆ

ನಗರಸಭೆ ಆಯುಕ್ತರಾದ ಶ್ರೀ ಪರಮೇಶ್ವರಪ್ಪ ರವರ ಬೇಜವಾಬ್ದಾರಿಯುತ ಕ್ರಮ ಕಂಡುಬಂದಿರುತ್ತದೆಂದು ಎಂದು ಅಭಿಪ್ರಾಯಿಸಿರುತ್ತಾರೆ.

29) ಗ್ರಾಮ ಲೆಕ್ಕಿಗರು, ಆರ್.ಐ. ರವರು ಮತ್ತು ಆರ್‌ಆರ್‌ಟಿ ಶಿರಸ್ತೇದಾರ ರವರ ವರದಿಗಳ ಆಧಾರದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ವಿದ್ಯಾರ್ಥಿಗಳೇ ತಪ್ಪು ಮಾಹಿತಿ ಸಲ್ಲಿಸಿದ್ದಾರೆ ಎಂದು ಹೇಳಿದ್ದು, ಪಲ್ಲವಿ ಮತ್ತು ಸಿಂಧೂ ರವರ ದಾಖಲೆಗಳು ಕಛೇರಿಯಲ್ಲಿ ಲಭ್ಯವಿಲ್ಲ ಎಂಬ ಬಗ್ಗೆ ಎದುರುದಾರರಾದ 2, 3 & 7 ರವರ ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸುತ್ತದೆ. ಸ್ಥಳ ಪರಿಶೀಲನೆ ಮಾಡಿ ಮಹಜರ್ ಕ್ರಮ ಜರುಗಿಸಿದ ಬಗ್ಗೆ ಕಂಡುಬರುವುದಿಲ್ಲ. ಗ್ರಾಮದಲ್ಲಿ ವಿಚಾರಣೆ ಮಾಡಿದ ಸಾಕ್ಷಿದಾರರ ವಿವರಗಳ ಬಗ್ಗೆ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

30) 10ನೇ ಎದುರುದಾರರು ಹಾಜರುಪಡಿಸಿರುವ ಅಧಿಕೃತ ಜ್ಞಾಪನ ಪತ್ರ ದಿನಾಂಕ 13/11/2012 ಅನ್ನು ಪರಿಶೀಲಿಸಿದಾಗ, 10ನೇ ಎದುರುದಾರರು ದಿನಾಂಕ 13/11/2012 ರ ಆದೇಶದಂತೆ ಕರ್ತವ್ಯಕ್ಕೆ ನೇಮಕಗೊಂಡಿರುತ್ತಾರೆ. ಪಡಿತರ ಚೀಟಿ ಸಂಖ್ಯೆ: ಎಆರ್‌ಎಸ್24157345 ರ ಜೆರಾಕ್ಸ್ ಕಾಪಿಯನ್ನು ಪರಿಶೀಲಿಸಿದಾಗ ದಿನಾಂಕ 31/05/2009 ರಂದು ಪೃಥ್ವಿರಾಜ್ ರವರ ಹೆಸರು ಕಂಡುಬರುತ್ತದೆ. ಬಿಪಿಎಲ್ ಪಡಿತರ ಚೀಟಿಗಾಗಿ ಕುಟುಂಬಗಳ ಆರ್ಥಿಕ ಸದೃಡತೆಯ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಅನಾಸ 80 ಡಿಆರ್‌ಎ 2012, ದಿನಾಂಕ 24/08/2012 ರ ಆದೇಶವನ್ನು ಹೊರಡಿಸಿದ್ದು, ಕ್ರಮ ಸಂಖ್ಯೆ 2 ರಲ್ಲಿ ಎಲ್ಲಾ ವರ್ಗದ ಸರ್ಕಾರಿ ನೌಕರರು ಎಂದು ನಮೂದಾಗಿರುತ್ತದೆ. ಸದೃಢ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲು ಬರುವುದಿಲ್ಲ. 10ನೇ ಎದುರುದಾರರು ನಾನು 2012 ರ ಸಾಲಿನಲ್ಲಿ ಕೆಲಸಕ್ಕೆ ಸೇರಿದ್ದು ಪಡಿತರ ಚೀಟಿ ಸಂಖ್ಯೆ: ಎಆರ್‌ಎಸ್24157345 2009 ರ ಸಾಲಿನಲ್ಲಿ ಅನುಮೋದಿಸಿದ್ದು ನಂತರ ನನ್ನ ಲಾಗಿನ್‌ನಲ್ಲಿ ಮುಂದುವರೆದಿದೆ ಎಂದು ಹೇಳುತ್ತಾರೆ. 10ನೇ ಎದುರುದಾರರು 13/12/2012 ರ ಆದೇಶದಂತೆ ಕರ್ತವ್ಯಕ್ಕೆ ನೇಮಕಗೊಂಡಿರುವುದು ಕಂಡುಬರುತ್ತದೆ. 2009 ರ ಸಾಲಿನಲ್ಲಿ ಪೃಥ್ವಿರಾಜ್ ರವರಿಗೆ ಪಡಿತರ ಚೀಟಿಯನ್ನು ವಿತರಿಸಿದಾಗ 10ನೇ ಎದುರುದಾರರು ಆರೋಗ್ಯ ನಿರೀಕ್ಷರಾಗಿ ಕರ್ತವ್ಯ

ನಿರ್ವಹಿಸಿರುವುದಿಲ್ಲ. ಆದುದರಿಂದ ಅವರು ಕರ್ತವ್ಯದಲ್ಲಿ ನಿರ್ಲಕ್ಷ್ಯತೆಯನ್ನು ತೋರುವ ಪ್ರಶ್ನೆ ಉಂಟಾಗುವುದಿಲ್ಲ. ಆದುದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡಬಹುದಾಗಿದೆ.

31) 11ನೇ ಎದುರುದಾರರು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪರಿಶೀಲಿಸದೇ ಪಡಿತರ ಚೀಟಿಗಳನ್ನು ವಿತರಿಸಿರುವುದು ಕಂಡುಬರುತ್ತದೆ.

32) 1ನೇ ಎದುರುದಾರರು ನಗರಸಭೆಯ ಆಯುಕ್ತರು ಆಗಿದ್ದು, ತಹಶೀಲ್ದಾರ್ ರವರ ಆದಾಯ ದೃಢೀಕರಣ ಪತ್ರ ಮತ್ತು ಪಡಿತರ ಚೀಟಿಯ ಆಧಾರದ ಮೇರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು ದಾಖಲಾತಿಗಳ ಆಧಾರದ ಮೇಲೆ ಕ್ರಮ ಕೈಗೊಂಡಿರುವುದರಿಂದ, ದಾಖಲಾತಿಗಳ ವಿತರಣೆಯಲ್ಲಿ ಸದರಿಯವರ ಪಾತ್ರ ಇಲ್ಲದಿರುವುದರಿಂದ ಅವರನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

33) 5ನೇ ಎದುರುದಾರರಾದ ಕೆ. ಪುಟ್ಟಯ್ಯ, 6ನೇ ಹೆಚ್ಚುವರಿ ಎದುರುದಾರರಾದ ವೈ.ಪಿ. ಪಾಲಾಕ್ಷ, 8ನೇ ಹೆಚ್ಚುವರಿ ಎದುರುದಾರರಾದ ಬಿ.ರಾಜಶೇಖರಪ್ಪ ಮತ್ತು 9ನೇ ಹೆಚ್ಚುವರಿ ಎದುರುದಾರರಾದ ಎಸ್.ಎಂ. ಶಿವಕುಮಾರ ರವರುಗಳು ಆರ್ಐ ಮತ್ತು ಗ್ರಾಮ ಲೆಕ್ಕಾಧಿಕಾರಿ ರವರ ವರದಿಗಳನ್ನು ಸಲ್ಲಿಸಿರುವ ವರದಿಗಳ ಆಧಾರದ ಮೇಲೆ ಕ್ರಮ ಜರುಗಿಸಿರುವುದರಿಂದ ಅವರುಗಳನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ ಎಂದು ಅಭಿಪ್ರಾಯಿಸಲಾಗಿದೆ.

34) **ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ 7ನೇ ಎದುರುದಾರರಾದ ಶ್ರೀ ಹೆಚ್. ಎಸ್. ಉಮೇಶ್, ಅಂದಿನ ಗ್ರಾಮಲೆಕ್ಕಾಧಿಕಾರಿಗಳು, ಜಾಜೂರು ವೃತ್ತ, ಕಸಬಾ ಹೋಬಳಿ ಪ್ರಸ್ತುತ ರಾಜಸ್ವ ನಿರೀಕ್ಷಕರು, ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರು**

(ಎ) ಗ್ರಾಮಲೆಕ್ಕಿಗರು, ಕಂದಾಯಾಧಿಕಾರಿಗಳು ಮತ್ತು ಆರ್.ಆರ್.ಟಿ. ಶಿರಸ್ತೇದಾರ್‌ರವರ ವರದಿಗಳ ಆಧಾರದ ಮೇರೆಗೆ ಸ್ಥಳ ತನಿಖೆ ಮಾಡಿರುವುದು ಕಂಡು ಬರುವುದಿಲ್ಲ.

(ಬಿ) ವಿದ್ಯಾರ್ಥಿಗಳೇ ತಪ್ಪು ಮಾಹಿತಿ ಸಲ್ಲಿಸಿದ್ದಾರೆ. ಪಲ್ಲವಿ ಮತ್ತು ಸಿಂಧೂರರವರ ದಾಖಲೆಗಳು ಕಛೇರಿಯಲ್ಲಿ ಲಭ್ಯವಿಲ್ಲ ಎಂದು ತಿಳಿಸಿ, ಕರ್ತವ್ಯ ನಿರ್ಲಕ್ಷತೆ ತೋರಿರುವುದು ಕಂಡು ಬಂದಿರುತ್ತದೆ.

35) ಆದುದರಿಂದ 2ನೇ ಎದುರುದಾರರಾದ ಶ್ರಿ. ಐ.ಎಂ.ಬಾಲಕೃಷ್ಣ, ಗ್ರಾಮ ಲೆಕ್ಕಿಗರು, 3ನೇ ಎದುರುದಾರರಾದ ಶ್ರೀ. ಕೆ.ವಿ. ನಂಜುಂಡಯ್ಯ, ರಾಜಸ್ವ ನಿರೀಕ್ಷಕರು ಹಾಲಿ ಆರ್‌ಆರ್‌ಟಿ ಶಿರಸ್ತೇದಾರ, 7ನೇ ಎದುರುದಾರರಾದ ಶ್ರೀ. ಹೆಚ್.ಎಸ್.ಉಮೇಶ್, ಗ್ರಾಮ ಲೆಕ್ಕಿಗರು ಹಾಲಿ ರಾಜಸ್ವ ನಿರೀಕ್ಷಕರು ಮತ್ತು 11ನೇ ಎದುರುದಾರರಾದ ಶ್ರೀ. ಗಂಗಾಧರಯ್ಯ, ಆಹಾರ ನಿರೀಕ್ಷಕರು ರವರು ನೀಡಿದ ಆಕ್ಷೇಪಣೆಯನ್ನು ಪರಿಶೀಲಿಸಿದ್ದು, ಅವರುಗಳ ವಿರುದ್ದದ ಪ್ರಕರಣವನ್ನು ಕೈಬಿಡಲು ಸೂಕ್ತ ಹಾಗು ಸಮಂಜಸ/ಸಮಾಧಾನಕರ ಕಾರಣಗಳನ್ನು ನೀಡಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದ್ದು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ಕಂಡ ಅಧಿಕಾರಿ/ನೌಕರರು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

36) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳು ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2, 3, 7 ಮತ್ತು 11ನೇ ಎದುರುದಾರರು ತಮ್ಮ ವಿರುದ್ದದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ನೀಡಿಲ್ಲವೆಂದು ಕಂಡು ಬಂದಿದ್ದರೂ ಸಹ, ತನಿಖಾ ಕಾಲದಲ್ಲಿ 2ನೇ ಎದುರುದಾರರಾದ ಶ್ರೀ ಐ. ಎಂ. ಬಾಲಕೃಷ್ಣ, ಹಿಂದಿನ ಗ್ರಾಮಲೆಕ್ಕಿಗರು ಇವರು ದಿನಾಂಕ 30-03-2020ರಂದು, 3ನೇ ಎದುರುದಾರರಾದ ಶ್ರೀ ನಂಜುಂಡಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು ಇವರು ದಿನಾಂಕ 31-05-2021ರಂದು, ಹಾಗು 11ನೇ ಎದುರುದಾರರಾದ ಶ್ರೀ ಗಂಗಾಧರಯ್ಯ, ಆಹಾರ ನಿರೀಕ್ಷಕರು ಇವರು ದಿನಾಂಕ 30-06-2014 ರಂದು ನಿವೃತ್ತರಾಗಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ದೂರುದಾರರು ಸದರಿ ಎದುರುದಾರರುಗಳ ವಿರುದ್ದ ಮಾಡಲಾದ ಆರೋಪವು 2015ನೇ ಸಾಲಿಗೆ ಸಂಬಂಧಿಸಿದ್ದು, ಈಗಾಗಲೇ 2, 3 ಮತ್ತು 11ನೇ ಎದುರುದಾರರು ಮೇಲ್ಕಂಡಂತೆ ನಿವೃತ್ತಿ ಹೊಂದಿರುವುದರಿಂದ, ಸದರಿಯವರುಗಳ ವಿರುದ್ದದ ಆರೋಪವು ಕರ್ನಾಟಕ ನಾಗರೀಕ ಸೇವಾ ನಿಯಮ 1958ರ ನಿಯಮ 214(2)(ಬಿ) ರೀತ್ಯ ಕಾಲಮಿತಿ ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿಯಾಗಿರುವುದರಿಂದ, ಸದರಿಯವರುಗಳ ವಿರುಧ್ಧದ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು, ಪ್ರಸ್ತುತ ಸರ್ಕಾರಿ ಸೇವೆಯಲ್ಲಿರುವ 7ನೇ

ಎದುರುದಾರರಾದ ಶ್ರೀ ಹೆಚ್. ಎಸ್. ಉಮೇಶ್, ಹಿಂದಿನ ಗ್ರಾಮಲೆಕ್ಕಾಧಿಕಾರಿಗಳು, ಜಾಜೂರು ವೃತ್ತ, ಕಸಬ ಹೋಬಳಿ, ಪ್ರಸ್ತುತ ರಾಜಸ್ವ ನಿರೀಕ್ಷಕರು ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (1)ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ತಮ್ಮ ವ್ಯಾಪ್ತಿಯಲ್ಲಿಯೇ ನಡೆಸಿ, ವಿಚಾರಣಾ ವರದಿಯನ್ನು ಮೂರು ತಿಂಗಳೊಳಗಾಗಿ ಈ ಕಛೇರಿಗೆ ಸಲ್ಲಿಸಲು ಕೋರಿದೆ.

12/4/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ